# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಮಾರತ್‌ಹಳ್ಳಿ ಉಪ ವಿಭಾಗ,
ಮಹದೇವಪುರ ವಲಯ, ಕೃಷ್ಣಾ ಶೈನ್ ಕಟ್ಟಡ, ಮಾರತ್‌ಹಳ್ಳಿ ಬ್ರಿಡ್ಜ್ ಹತ್ತಿರ, ಬೆಂಗಳೂರು:560 037.

ಸಂ: ಬಿಬಿಎಂಪಿ/ಸಕಾಅ/ಮಾಉವಿ/ವಾ150/ಪಿ.ಆರ್/309 /2020-21 ದಿನಾಂಕ: 01/12/2020

## ಸಭೆಯ ಆಹ್ವಾನ ಪತ್ರ

ಮಾನ್ಯ ಆಯುಕ್ತರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21, ದಿನಾಂಕ:02.10.2020ರಂತೆ ವಾರ್ಡ್ ನಂ.150 ಬೆಳ್ಳಂದೂರು ವ್ಯಾಪ್ತಿಗೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿರುತ್ತದೆ.

ಮುಂದುವರೆದಂತೆ ದಿನಾಂಕ:05.12.2020ರಂದು ಶನಿವಾರ ಬೆಳ್ಳಗೆ 11.30 ಘಂಟೆಗೆ ಸರಿಯಾಗಿ ವಾರ್ಡ್ ನಂ.150 ಬೆಳ್ಳಂದೂರು, ಸಹಾಯಕ ಅಭಿಯಂತರರ ವಾರ್ಡ್ ಕಛೇರಿ ಇಲ್ಲಿ ನೋಡೆಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ವಾರ್ಡ್ ನಂ.150ಕ್ಕೆ ಸಂಬಂಧಿಸಿದಂತೆ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು, ವಾರ್ಡ್ ವ್ಯಾಪ್ತಿಯಲ್ಲಿ ಕೈಗೊಳ್ಳಬೇಕಾಗಿರುವ ಕೆಲಸಕಾರ್ಯಗಳು ಹಾಗೂ ಘನತ್ಯಾಜ್ಯ ನಿರ್ವಹಣೆ, ಇತರೆ ವಿಷಯಗಳ ಬಗ್ಗೆ ಚರ್ಚಿಸಲು ಸಾಮಾನ್ಯ ಸಭೆಯನ್ನು ಕರೆಯಲಾಗಿದ್ದು, ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳು ಹಾಗೂ ಸದಸ್ಯರು ತಪ್ಪದೇ ಈ ಸಭೆಗೆ ಹಾಜರಾಗಿ ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ಈ ಮೂಲಕ ತಿಳಿಯಪಡಿಸಿದೆ.

-: ಸಭೆಯ ಅಜೆಂಡಾ :-

| | |
|---|---|
| 1 | ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್ -19 ಕ್ಯಾಂಪ್‌ಗಳಲ್ಲಿ ಟೆಸ್ಟ್‌ಗಳ ನಿರ್ವಹಣೆ ಬಗ್ಗೆ. |
| 2 | ವಾರ್ಡ್ ವ್ಯಾಪ್ತಿಯ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳ ದುರಸ್ಥಿಪಡಿಸುವ ಬಗ್ಗೆ. |
| 3 | ರಾಜಕಾಲುವೆಗಳಲ್ಲಿ ಹೂಳು ತೆಗೆಯುವ ದೂರುಗಳ ಬಗ್ಗೆ. |
| 4 | ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಚರ್ಚಿಸುವ ವಿಚಾರ. |
| 5 | ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಬಗ್ಗೆ. |
| 6 | BWSSB ಯ UGD ಹೊಸಲೈನ್‌ಗಳ ಕಾಮಗಾರಿಗಳ ಬಗ್ಗೆ. |
| 7 | ಬೀದಿ ದೀಪಗಳ ನಿರ್ವಹಣೆ ಕುರಿತು. |
| 8 | ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಬಹುದಾದ ಇತರೆ ವಿಚಾರಗಳು. |

**ಪ್ರತಿಯನ್ನು:-**

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ರವರಿಗೆ ಸಲ್ಲಿಸಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರತ್ತಹಳ್ಳಿ ಉಪವಿಭಾಗ ರವರಿಗೆ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ವಿಭಾಗ ರವರಿಗೆ ಸಲ್ಲಿಸಿದೆ.
5. ಸಹ ಕಂದಾಯ ಅಧಿಕಾರಿಗಳು, ಮಾರತ್ತಹಳ್ಳಿ ಉಪವಿಭಾಗ ರವರಿಗೆ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂಎಸ್‌ಎಸ್‌ಬಿ ರವರಿಗೆ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಕಸವನಹಳ್ಳಿ ರವರಿಗೆ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಕಾಡುಬೀಸನಹಳ್ಳಿ ರವರಿಗೆ ಸಲ್ಲಿಸಿದೆ.
9. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ ವಿಭಾಗ ಬಿಬಿಎಂಪಿ ರವರಿಗೆ ಸಲ್ಲಿಸಿದೆ.
10. ಪೋಲೀಸ್ ಅಧಿಕಾರಿಗಳು ಬೆಳ್ಳಂದೂರು/ಮಾರತ್ತಹಳ್ಳಿ ಪೋಲೀಸ್ ಠಾಣೆ ರವರಿಗೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ, ರವರಿಗೆ ಸಲ್ಲಿಸಿದೆ.
12. ಕಾರ್ಯಪಾಲಕ ಅಭಿಯಂತರರು, ಬೃಹತ್ ಮಳೆ ನೀರುಗಾಲುವೆ ವಿಭಾಗ, ಜಯನಗರ, ಬಿ.ಡಿ.ಎ ಕಾಂಪ್ಲೆಕ್ಸ್ ರವರಿಗೆ ಸಲ್ಲಿಸಿದೆ.
13. ಪಶುಸಂಗೋಪನಾ ಇಲಾಖೆ ಬಿಬಿಎಂಪಿ ರವರಿಗೆ ಸಲ್ಲಿಸಿದೆ.
14. ಪರಿಸರ ಇಲಾಖೆ, ಬಿಬಿಎಂಪಿ ರವರಿಗೆ ಸಲ್ಲಿಸಿದೆ.
15. ತೋಟಗಾರಿಕೆ ಇಲಾಖೆ ಬಿಬಿಎಂಪಿ ರವರಿಗೆ ಸಲ್ಲಿಸಿದೆ.
16. ಆರಕ್ಷಕ ವೃತ್ತ ನಿರೀಕ್ಷಕರು (ಸಂಚಾರ) ಹೆಚ್.ಎಸ್.ಆರ್ ಲೇಔಟ್ ರವರಿಗೆ.

Scanned by TapScanner

17. RWA/NGO's Of Bellandur.

18. ವಾರ್ಡಿನ ಹಿರಿಯ /ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.150 ಬೆಳ್ಳಂದೂರು ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.

19. ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ದೊಡ್ಡಕನ್ನೆಲ್ಲಿ ರವರ ಮಾಹಿತಿಗಾಗಿ ಸಲ್ಲಿಸಿದೆ.

20. ಸಹ ಕಂದಾಯ ಅಧಿಕಾರಿಗಳು, ಮಾರತ್ತಹಳ್ಳಿ ಉಪವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂದಾಯ ಪರಿವೀಕ್ಷಕರು ಮತ್ತು ಕಂದಾಯ ವಸೂಲಿಗಾರರು ರವರ ಮಾಹಿತಿಗಾಗಿ ಸಲ್ಲಿಸಿದೆ.

21. ವಾರ್ಡ್ ಕಛೇರಿ ಪ್ರತಿ.

ಸದಸ್ಯ ಕಾರ್ಯದರ್ಶಿ
ವಾರ್ಡ್ ಕಮಿಟಿ, ವಾರ್ಡ್ ನಂ.150 ಹಾಗೂ
ಸಹಾಯಕ ಅಭಿಯಂತರರು ಬೆಳ್ಳಂದೂರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

Scanned by TapScanner

# " ವಾರ್ಡ್ ಕಮಿಟಿ ಸಭೆಯ ಹಾಜರಾತಿ"

ದಿನಾಂಕ: 05.12.2020 ರಂದು ಶನಿವಾರ ಬೆಳ್ಳಗೆ 11.30 ಗಂಟೆಗೆ ಸರಿಯಾಗಿ ಬೆಳ್ಳಂದೂರು ಬಡಾವಣೆ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯ ನೋಡೆಲ್ ಅಧಿಕಾರಿ ಶ್ರೀ. ಡಾ॥ ಅಮೃತೇಶ್ ರವರು ಅಧ್ಯಕ್ಷತೆ ವಹಿಸಿದ್ದು, ಸದರಿ ಸಭೆಯಲ್ಲಿ ಹಾಜರಿದ್ದ ಕಮಿಟಿಯ ಸದಸ್ಯರುಗಳು.

**ಸದಸ್ಯರುಗಳು**

| ಕ್ರಮ ಸಂಖ್ಯೆ | ವಾರ್ಡ್ ಕಮಿಟಿ ಸದಸ್ಯರುಗಳು | ಸ.ಹಿ |
|---|---|---|
| 1 | ಶ್ರೀ. ಸುರೇಶ್ | N-S (signature) |
| 2 | ಶ್ರೀ.ರಮೇಶ್ | A. Ramesh (signature) |
| 3 | ಶ್ರೀಮತಿ.ವಿದ್ಯಾಭಟ್ | |
| 4 | ಶ್ರೀಮತಿ.ಕೌಶಲ್ಯ ಲಕ್ಕಿ | |
| 5 | ಶ್ರೀಮತಿ.ಅಂಜಲಿ | |
| 6 | ಶ್ರೀ. ಜ್ಯೋತಿ ರಂಜನ್ | |
| 7 | ಶ್ರೀ.ಅಂಬರೀಶ್ ನಾಯರ್ | |
| 8 | ಶ್ರೀ.ಮುರಳಿ | |
| 9 | ಶ್ರೀ.ವೇಣುಗೋಪಾಲ್ | |
| 10 | ಶ್ರೀ.ವಸಂತ್‌ರೆಡ್ಡಿ | (signature) |

(signature)
ಕಾರ್ಯದರ್ಶಿಗಳು
ವಾರ್ಡ್ ನಂ. 150 ಬೆಳ್ಳಂದೂರು.

(signature)
ಅಧ್ಯಕ್ಷರು
ನೋಡಲ್ ಅಧಿಕಾರಿ

Scanned by TapScanner

| | | | |
|---|---|---|---|
| 1) | Dr Bharath Padmashali | Medical officer | [signature] |
| 2) | Sandesh Shetty | AEE, RI | [signature] |
| 3) | Ravinath. B.S | PI traffic | [signature] |
| 4) | Maheshkumar. S | SR.HI - W-150 | [signature] |
| 5) | Harish, V | JHI. W150A | [signature] |
| 6) | RAJANNA. K | JrHI 150B | [signature] |
| 7) | chandrashekar. D R | electrical - eignt | [signature] |
| 8) | SWAMY. B | R.I - W-150 | [signature] |
| 9) | Neelakanthraj. Natikar | Meterreader | [signature] |
| 10) | A.G. Babu | RI W150 | [signature] |
| 11) | Mithun | BWSSB (WI) W-150 | [signature] |
| 12) | Subhash JE (Elect) | BESCOM. Kasavanahalli | [signature] |
| 13) | G.S. Siddalingayya | A.RO. | [signature] |
| 14) | Puttappa - B.S, | AEE, BESCOM, S-11 s/d | [signature] |
| 15 | Venkatesh KR | WARD Marshal | [signature] |
| 16. | Dr. S.K. Amruthavalli | ward nodel officer | [signature] |

Scanned by TapScanner

## "ದಿನಾಂಕ:05.12.2020ರ ಬೆಳ್ಳಗೆ 11.30 ಗಂಟೆಗೆ ವಾರ್ಡ್ ನಂ.150ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು"

****************

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶ ಸಂಖ್ಯೆ:ಬಿ12(5)ಪಿ.ಆರ್/35/2020-21, ದಿನಾಂಕ:02.10.2020ರಂತೆ ದಿನಾಂಕ:05.12.2020ರ ಬೆಳ್ಳಗೆ: 11.30 ಗಂಟೆಗೆ ವಾರ್ಡ್ ನಂ.150ರ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯ ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿ ಶ್ರೀ. ಡಾ|| ಅಮೃತೇಶ್ ರವರ ಅಧ್ಯಕ್ಷತೆಯಲ್ಲಿ ನಡೆದ ಮಾಸಿಕ ಮೊದಲನೇ ವಾರದ ಸಮಿತಿ ಸಭೆಗೆ ಹಾಜರಾದ ಅಧಿಕಾರಿ ಸಿಬ್ಬಂಧಿಗಳು ಮತ್ತು ವಾರ್ಡ್ ಸಮಿತಿ ಸಭೆಯ ಸದಸ್ಯರುಗಳು ಹಾಗೂ ಸದರಿ ಸಭೆಯ ನಡವಳಿಗಳು.

| ಕ್ರ. ಸಂ | ಸಭೆಗೆ ಹಾಜರಿದ್ದ ಅಧಿಕಾರಿಗಳು/ಸಿಬ್ಬಂದಿಗಳು/ಸದಸ್ಯರುಗಳು | ಹುದ್ದೆ |
|---|---|---|
| 1 | ಶ್ರೀ.ಡಾ|| ಅಮೃತೇಶ್ | ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳು |
| 2 | ಶ್ರೀ.ಸಿ.ಮುರಳೀಧರ್ | ಸಹಾಯಕ ಅಭಿಯಂತರರು |
| 3 | ಶ್ರೀ. ಡಾ|| ಭರತ್ | Medical Officer |
| 4 | ಶ್ರೀ.ಸಂದೇಶ್ ಶೆಟ್ಟಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) |
| 5 | ಶ್ರೀ.ರವಿನಾಥ್ | ಸಂಚಾರಿ ಪೋಲಿಸ್ ಇಲಾಖೆ |
| 6 | ಶ್ರೀ.ಮಹೇಶ್ ಕುಮಾರ್ | ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.150 |
| 7 | ಶ್ರೀ.ಹರೀಶ್ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.150 |
| 8 | ಶ್ರೀ.ರಾಜಣ್ಣ | ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.150 |
| 9 | ಶ್ರೀ.ಚಂದ್ರಶೇಖರ್ | ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರು |
| 10 | ಶ್ರೀ.ಸ್ವಾಮಿ | ಕಂದಾಯ ನಿರೀಕ್ಷಕರು ವಾರ್ಡ್ ನಂ.150 |
| 11 | ಶ್ರೀ.ನೀಲಕಾಂತ ರಾಜು | ಮೀಟರ್ ರೀಡರ್ |
| 12 | ಶ್ರೀ.ಎ.ಜಿ ಬಾಬು | ಕಂದಾಯ ನಿರೀಕ್ಷಕರು ವಾರ್ಡ್ ನಂ.150 |
| 13 | ಶ್ರೀ.ಮಿಥುನ್ | ಸಹಾಯಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್ಬಿ) |
| 14 | ಶ್ರೀ.ಸುಭಾಷ್ | ಕಿರಿಯ ಅಭಿಯಂತರರು (ಬೆಸ್ಕಾಂ ಕಸವನಹಳ್ಳಿ) |
| 15 | ಶ್ರೀ.ಸಿದ್ದಲಿಂಗಯ್ಯ | ಸಹ ಕಂದಾಯ ಅಧಿಕಾರಿ, ಮಾರತ್ತಹಳ್ಳಿ ಉಪವಿಭಾಗ |
| 16 | ಶ್ರೀ.ಪುಟ್ಟಪ್ಪ ಬಿ.ಎಸ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ ಎಸ್-11) |
| 17 | ಶ್ರೀ.ವೆಂಕಟೇಶ್ ಕೆ.ಆರ್ | ವಾರ್ಡ್ ಮಾರ್ಷಲ್ (ಬೆಳ್ಳಂದೂರು ವಾರ್ಡ್ ನಂ.150) |

ಸಭೆಗೆ ಹಾಜರಿದ್ದ ಅಧಿಕಾರಿಗಳಿಗೆ ವಂದಿಸುತ್ತಾ, ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಗೆ ಗೈರು ಹಾಜರಾಗಿರುವ ಅಧಿಕಾರಿಗಳಿಗೆ ನೋಟಿಸ್ ನೀಡಲು ಮಾನ್ಯ ನೋಡಲ್ ಅಧಿಕಾರಿಗಳು ತಿಳಿಸಿರುತ್ತಾರೆ. ಅದರಂತೆ ಕ್ರಮ ಕೈಗೊಳ್ಳಲು ಒಪ್ಪಿರುತ್ತದೆ.

1. ಚರ್ಚೆ ವಿಷಯಗಳ ಪಟ್ಟಿಯನ್ನು ಎಲ್ಲಾ ಸದಸ್ಯರಿಗೂ ವಿತರಣೆ ಮಾಡಲಾಯಿತು.
2. ಕೋವಿಡ್-19ಗೆ ಸಂಬಂಧಿಸಿದಂತೆ, ಕೈಗೊಂಡ ಟೆಸ್ಟ್‌ಗಳ ವಿವರಗಳು ಈ ಕೆಳಕಂಡಂತಿವೆ:

1. Covid-19 Total cases: 3549
   Male: 2191
   Female: 1358

2. Home isolation Completed: 1770

Scanned by TapScanner

3. Discharged From Hospital: 1279.
   Male: 895
   Female: 384

4. Active cases: 476
5. Total Death case: 24
   Male: 17
   Female: 7

ಮುಂದುವರೆದಂತೆ 21.11.2020 ರಿಂದ 04.12.2020 ರ ವರೆಗಿನ ದೊಡ್ಡಕನ್ನೆಲ್ಲಿ ಆರೋಗ್ಯ ಕೇಂದ್ರದಲ್ಲಿ ಕೈಗೊಂಡ ಒಟ್ಟು ಕೋವಿಡ್-19 ಟೆಸ್ಟಿಂಗ್‌ಗಳು ಸುಮಾರು 3297 ಆಗಿರುವ ಬಗ್ಗೆ ಡಾ|| ಬಿ. ಭರತ್ ರವರು ಸಭೆಯಲ್ಲಿ ತಿಳಿಸಿರುತ್ತಾರೆ.

3. ವಾರ್ಡ್ ವ್ಯಾಪ್ತಿಯ ಕಾಮಗಾರಿಗಳು ಮತ್ತು ರಸ್ತೆ ಗುಂಡಿಗಳಿಗೆ ಸಂಬಂಧಿಸಿದಂತೆ ಚಲ್ಲಘಟ್ಟ, ಮೇಜರ್ ರಸ್ತೆ, ಗೇರ್ ಸ್ಕೂಲ್ ರಸ್ತೆ ಮತ್ತು ಒ.ಆರ್.ಆರ್. ಮಾಲ್ ರಸ್ತೆ ಕಾಮಗಾರಿಗಳು ಪೂರ್ಣಗೊಂಡಿವೆ. ಉಳಿದ ಕಸವನಹಳ್ಳಿ ಹಾಗೂ ಹರಳೂರು ರಸ್ತೆ ಗುಂಡಿಗಳ ಕಾಮಗಾರಿಗಳು ಮುಂದಿನ ವಾರದಲ್ಲಿ ಪೂರ್ಣವಾಗುತ್ತವೆಂದು ವಾರ್ಡಿನ ಸಹಾಯಕ ಅಭಿಯಂತರರು ತಿಳಿಸಿದರು.

4. ರಾಜಕಾಲುವೆಗಳಲ್ಲಿ ಹೂಳನ್ನು ತೆಗೆಯುವ ಗುತ್ತಿಗೆದಾರರಾದ ಶ್ರೀ ಕೆ.ರಾಘವೇಂದ್ರ ರವರಿಗೆ ಕೋವಿಡ್ ಪಾಸಿಟಿವ್ ಬಂದಿರುವ ಕಾರಣ ಸಭೆಗೆ ಬರಲು ಸಾಧ್ಯವಾಗುತ್ತಿಲ್ಲವೆಂದು ತಿಳಿಸಿರುತ್ತಾರೆ.

5. ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಬಗ್ಗೆ ಚರ್ಚಿಸಲಾಯಿತು. ಸದರಿ ಇಲಾಖೆಗೆ ಸಂಬಂಧಿಸಿದಂತೆ ಬಿಡಬ್ಲ್ಯೂಎಸ್‌ಎಸ್‌ಬಿ ಯ ಸಹಾಯಕ ಅಭಿಯಂತರರಾದ ಶ್ರೀ.ಮಿಥುನ್ ರವರು ಹಾಜರಾಗಿದ್ದರು.

6. ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ, ಹಸಿ ಕಸ-19 ಟನ್, ಒಣ ಕಸ-17 ಟನ್‌ಗಳಷ್ಟು ಸಂಗ್ರಹಣೆಯಾಗಿದ್ದು, ಹಸಿ ಕಸವನ್ನು ಚಿಕ್ಕನಾಗಮಂಗಲ ಪ್ರದೇಶದಲ್ಲಿ ಡಂಪಿಂಗ್ ಪಾಯಿಂಟ್‌ಗೆ ಹಾಗೂ (ರಿಜೆಕ್ಟ್)ಒಣ ಕಸವನ್ನು ಮಿಟಗಾನಹಳ್ಳಿ ಬೆಳ್ಳಳ್ಳಿ ಪ್ರದೇಶದ ಡಂಪಿಂಗ್ ಪಾಯಿಂಟ್‌ಗೆ ರವಾನೆಯಾಗುತ್ತಿರುವ ಬಗ್ಗೆ ವಾರ್ಡಿನ ಕಿರಿಯ ಆರೋಗ್ಯ ಪರಿವೀಕ್ಷಕರಾದ ರಾಜಣ್ಣ ರವರು ತಿಳಿಸಿದರು.

7. ಬೆಳ್ಳಂದೂರಿನಲ್ಲಿ **14th Finance** ನಲ್ಲಿ **UGD** ಪೈಪ್‌ಗಳನ್ನು ಕಾಮಗಾರಿಗಳನ್ನು ಕೈಗೊಂಡಿರುವ ಬಗ್ಗೆ (ವಾರ್ಡ್ ಕಮಿಟಿ ಸದಸ್ಯರು) ಸುರೇಶ್ ರವರು ತಿಳಿಸುತ್ತಾರೆ.

8. ವಾರ್ಡಿನಾದ್ಯಂತ ಕೆಲವು ಕಡೆಗಳಲ್ಲಿ ಬೀದಿ ದೀಪಗಳು ಕಾರ್ಯ ನಿರ್ವಹಿಸುತ್ತಿರುವುದಿಲ್ಲವೆಂಬ ದೂರುಗಳಿಗೆ ಸಂಬಂಧಿಸಿದಂತೆ ವಾರ್ಡಿನಲ್ಲಿ ಪ್ರತಿ ದಿನ ಉರಿಯುತ್ತಿಲ್ಲದ ಬೀದಿ ದೀಪಗಳನ್ನು ಗುರುತಿಸಿ ವಾಟ್ಸ್‌ಆಪ್ (What'sapp) ಗ್ರೂಪ್‌ನಲ್ಲಿ ಕಳುಹಿಸುತ್ತಿದ್ದು ಸಂಬಂಧಪಟ್ಟ ಗುತ್ತಿಗೆದಾರರಿಗೆ ರಿಪೇರಿ ಮಾಡಲು ಸೂಚಿಸಲಾಯಿತು.

Scanned by TapScanner

9. ಅಧ್ಯಕ್ಷರು ಶ್ರೀಮತಿ.ಲೀಲಾ ಕೆಪಿಸಿಎಲ್ ಲೇಔಟ್ ರವರು ಕೋರಿರುವ 2 ವಿದ್ಯುತ್ ಕಂಬಗಳನ್ನು ಮತ್ತು ವಿದ್ಯುತ್ ದೀಪಗಳ ಅಳವವಡಿಕೆಯ ಬಗ್ಗೆ ಚರ್ಚಿಸಲಾಗಿ, ಅಲ್ಲಿನ ಬೆಸ್ಕಾಂ ಸಹಾಯಕ ಕಾರ್ಯಪಾಲಕ ಅಭಿಯಂತರರು ಶ್ರೀ.ಪಿ.ಪುಟ್ಟಪ್ಪ ರವರು ಈ ಕುರಿತು ಕ್ರಮ ವಹಿಸುತ್ತೇನೆಂದು ಸಭೆಯಲ್ಲ ತಿಳಿಸಿರುತ್ತಾರೆ.

10.ಕಂದಾಯ ಅಧಿಕಾರಿಗಳು ವಾರ್ಡ್-150ರಲ್ಲಿ ಸಂಗ್ರಹಣೆಯಾದಂತಹ ಆಸ್ತಿ ತೆರಿಗೆಯ ವಿವರಗಳನ್ನು ನೀಡಲಾಗಿ, ವಿವರಗಳು ಈ ಕೆಳಕಂಡಂತಿರುತ್ತವೆ.

**Last 15 Days Collection Details** **Dated 05.12.2020**

| Ward | 2020-21 Dues | | Collection | | Balance in Crores | |
|---|---|---|---|---|---|---|
| | No. of Properties | Amount Involved | No. of Properties | Amount Collection | No. of Properties | Balance Collection |
| **150-Bellanduru** | 6956 | 34.97 | 121 | 15.93 | 6835 | 19.04 |

11. ಮಾನ್ಯ ಆಯುಕ್ತರು ಬಿಬಿಎಂಪಿ ರವರು ನೋಡಲ್ ಅಧಿಕಾರಿಗಳಿಗೆ ತಿಳಿಸಿರುವ ಮುಖ್ಯ ಸಂದೇಶದಲ್ಲಿ **"My City My Budget"** ನ ಅಡಿಯಲ್ಲಿ ವಾರ್ಡ್ ನಂ. 150 ವ್ಯಾಪ್ತಿಯ ದೊಡ್ಡಕನ್ನೆಲ್ಲಿ, ದೇವರಬೀಸನಹಳ್ಳಿ, ಕೈಕೊಂಡ್ರಹಳ್ಳಿ ಹಾಗೂ ಕಸವನಹಳ್ಳಿ ಯಲ್ಲಿ ಸಾರ್ವಜನಿಕ ಶೌಚಾಲಯಗಳ ಮತ್ತು ಫುಟ್‌ಪಾತ್‌ಗಳ ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲು ಸೂಚಿಸಿರುತ್ತಾರೆ.

12. ಅಜೆಂಡಾದಲ್ಲಿ ಸೂಚಿಸಿರುವ ಮುಖ್ಯ ವಿಚಾರಗಳನ್ನು ನೋಡೆಲ್ ಅಧಿಕಾರಿಯವರು ಮತ್ತು ಕಮಿಟಿ ಸಭೆಯ ಸದಸ್ಯರ ಸಮ್ಮುಖದಲ್ಲಿ ವಿವರವಾಗಿ ಚರ್ಚಿಸಿ, ತೊಂದರೆಗಳನ್ನು ಬಗೆಹರಿಸುವ ಬಗ್ಗೆ ಚರ್ಚಿಸಲಾಯಿತು.

ತದ ನಂತರ ಮಾನ್ಯ ಅಧ್ಯಕ್ಷರು ಮತ್ತು ನೋಡೆಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಕಾರ್ಯದರ್ಶಿಗಳು
ಮತ್ತು ಸಹಾಯಕ ಅಭಿಯಂತರರು
ವಾರ್ಡ್ ನಂ. 150 ಬೆಳ್ಳಂದೂರು.

ಸಹಿ/-
ಅಧ್ಯಕ್ಷರು
ನೋಡೆಲ್ ಅಧಿಕಾರಿ
ವಾರ್ಡ್ ನಂ. 150 ಬೆಳ್ಳಂದೂರು

<u>**ಪ್ರತಿಯನ್ನು**</u>:-
1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ಬಿಬಿಎಂಪಿ ರವರ ಘನ ಮಾಹಿತಿಗಾಗಿ ಸಲ್ಲಿಸಿದೆ.
2. ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಛೇರಿ ಪ್ರತಿ.


Scanned by TapScanner







Scanned by TapScanner




Scanned by TapScanner